ಶ್ರೀ ಬಿ. ಸತ್ಯನಾರಾಯಣಸಿಂಗ್.—ಆ ಕಂಪನಿಯವರು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿ ಅವರ ಪರವಾನಿಗೆಯನ್ನು ಪಡೆದಿದ್ದಾರೆಯೇ ? ಮತ್ತು ಇದೇ ರೀತಿಯ ಕಂಪನಿಯನ್ನು ಪ್ರಾರಂಭ ಮಾಡಲು ಚೌಗಲೆ ಕಂಪನಿಯವರು ಮುಂದೆ ಬಂದಾಗ ಸರ್ಕಾರದಿಂದ ಅವರಿಗೆ ಸರಿಯಾದ ಪ್ರೋತ್ಸಾಹ ಸಿಗಲಿಲ್ಲ, ಆದರೆ ಈಗ ಈ ಕಂಪನಿಯವರು ಸ್ಥಾಪಿಸಬೇಕೆಂದು ಹೊರಟಿರುವ ಸ್ಪಾಂಜ್ ಐರನ್ ಓರ್ ಪ್ಲಾಂಟ್‌ಗೆ ಕೇಂದ್ರ ಸರ್ಕಾರದ ಅನುಮತಿ ದೊರಕಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಚೌಗಲೆ ಕಂಪನಿಯವರು ಸ್ಥಾಪನೆ ಮಾಡಬೇಕೆಂದು ಮುಂದೆ ಬಂದಿದ್ದಾಗ ಕೇಂದ್ರ ಸರ್ಕಾರದವರಿಗೂ ಮತ್ತು ಆ ಕಂಪನಿಯವರಿಗೂ ತಾತ್ವಿಕವಾಗಿ ಭಿನ್ನಾಭಿಪ್ರಾಯ ಬಂದಾಗ ಅವರು ಅದನ್ನು ಕೈಬಿಟ್ಟರು. ಆದರೆ ಈಗ ಇವರು ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ.

ಶ್ರೀ ಎಸ್. ಎಸ್. ಕೃಷ್ಣನ್.—ಇದು ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಾರಂಭವಾಗುತ್ತಿದೆ ಎಂದು ನಾನು ನಂಬಿದ್ದೇವೆ, ಆದಕಾರಣ ಈ ಬಗ್ಗೆ ಅವರಿಗೆ ಕೇಂದ್ರ ಸರ್ಕಾರದಿಂದ ಲೈಸನ್ಸ್ ಕೊಡಿಸಲು ತಾವು ಏತಕ್ಕೆ ಶಿಫಾರಸ್ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಇದು ಪೂರ್ಣವಾಗಿ ಸಾರ್ವಜನಿಕ ಕ್ಷೇತ್ರವಾಗುವುದಿಲ್ಲ. ಏಕೆಂದರೆ ಇದರಲ್ಲಿ ಮೈಸೂರು ಮೀನರಲ್ಸ್ ಅವರದ್ದು ೨೬ ಪರ್ಸೆಂಟ್ ಷೇರ್ಸ್ ಇದ್ದರೆ ಸಾಲ್‌ಗಾಂವಕರ್ ಅವರದ್ದು ೭೬ ಪರ್ಸೆಂಟ್ ಷೇರ್ಸ್ ಇದೆ.

INCOME DERIVED FROM THE FOREST DEPARTMENT

485. SRI B. BYRAPPAJI (Turuvekere).—Will the Minister for Food and Forests be pleased to state :—

(*a*) the Revenue derived in each district from the forest department during the years 1969-70, 1970-71 and 1971-72 ;

(*b*) whether the revenue of the forest department is increasing in respect of those years as seen from the above survey ;

(*c*) if so, whether Government has taken any steps to increase the revenue further ?

SRI K. H. PATIL (Minister for Food and Forests).—

(*a*) The areas of Forest Division do not conform to the territorial limits of the revenue Districts. The revenue realised in the Forest Divisions for the years 1969-70, 1970-71 and 1971-72 is furnished in the Statement placed on the Table of the House. *

(*b*) Yes.

(*c*) The following measures have been taken to increase the revenue of the Department :

(i) Government have revised the seigniorage rates of timber supplied to wood based industries, bamboo to paper mills, sandal-wood to oil factories and timber and firewood released on permits. The scheduled rates for release of timber for *bona fide* use, to Railway

* Copy placed in the Karnataka Legislature library vide No. 25 dated 3-4-1974.

(SRI K. H PATIL)

and Defence Departments have been enhanced. The rates of supply of railway sleepers has been increased.

(ii) The remnant material in worked out areas is arranged to be utilised.

(iii) Planting of short rotation timber and industrial species and commercial species like rubber and coco have been taken up, Cashew Plantations have been taken up for manuring, soil working and prophylactic treatment.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗ ಅರಣ್ಯಸಂಪತ್ತು ಪ್ರತಿವರ್ಷ ಕಡಿಮೆಯಾಗುತ್ತಾ ಬಂದಿದೆ. ಅದರಲ್ಲಿಯೂ ಮುಖ್ಯವಾಗಿ ಗಂಧದ ಮರಗಳನ್ನು ಹೆಚ್ಚಾಗಿ ಕಡಿಯುತ್ತಿರುವುದರಿಂದ ಇನ್ನು ಹತ್ತು ವರ್ಷಗಳಲ್ಲಿ ಅದರ ಉತ್ಪತ್ತಿಯಾಗಿ ಗಂಧದಎಣ್ಣೆ ಕಾರ್ಖಾನೆಗಳನ್ನು ಮುಚ್ಚುವ ಕಾಲ ಬರಬಹುದು, ಮುಖ್ಯವಾಗಿ ಈಗ ತಮ್ಮ ಇಲಾಖೆಯಿಂದ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಏನು ಗಂಧದ ಮರಗಳನ್ನು ಕೊಡುತ್ತಿದ್ದೀರಿ ಅದಕ್ಕೆ ಅವರು ಹಣ ಕೊಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು ? ಮತ್ತು ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಕೆ. ಎಚ್. ಪಾಟೀಲ್.—ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ಗೆ ನಾವು ಮಾರಾಟ ಮಾಡುತ್ತಿರುವುದರಿಂದ ಅವರಿಂದ ಹಣ ಬರುತ್ತಿದೆ ಎಂದು ಅರ್ಥ, ಆದರೆ ಮಾರ್ಕೆಟ್ ರೇಟ್ ಬರುತ್ತಿಲ್ಲ, ಏಕೆಂದರೆ ನಾವು ಅವರಿಗೆ ಸಬ್ಸಿಡಿ ರೇಟ್‌ನಲ್ಲಿ ಮಾರಾಟ ಮಾಡುತ್ತಿದ್ದೇವೆ. ಫಾರೆಸ್ಟ್ ಕಡಿಮೆಯಾಗುವುದಕ್ಕೆ ಕಾರಣ ಹಿಂದಿನ ಸರ್ಕಾರದವರು ವ್ಯವಸಾಯಕ್ಕೆ ಅರಣ್ಯ ಭೂಮಿಯನ್ನು ರಿಲೀಸ್ ಮಾಡುತ್ತಾ ಇದ್ದದ್ದು, ಆದರೆ ಈಗ ಆ ಒಂದು ಪಾಲಿಸಿಯನ್ನು ತಮ್ಮೆಲ್ಲರ ಸಹಕಾರದಿಂದ ಬದಲಾವಣೆ ಮಾಡಿರುವುದರಿಂದ ಇನ್ನು ಮುಂದೆ ಆ ರೀತಿ ಆಗುವುದಿಲ್ಲ ಎಂದು ನಾನು ಭಾವಿಸಿ ಮಾಡುತ್ತೇನೆ. ಇದರ ಜೊತೆಗೆ ಒಂದು ಮರವನ್ನು ಕಡಿದರೆ ಎರಡು ಸಸಿಗಳನ್ನು ಹಚ್ಚಲೇ ಬೇಕು ಎಂದು ಆಜ್ಞೆ ಮಾಡಿರುವುದರಿಂದ ಇನ್ನು ೮–೧೦ ವರ್ಷಗಳಲ್ಲಿ ನಾವು ವೆಲ್-ಪ್ಲಾಂಟ್ ಫಾರೆಸ್ಟ್‌ಗೆ ಬರುತ್ತೇವೆಂದು ತಿಳಿಸುತ್ತೇನೆ.

ಶ್ರೀ ಸಿ. ಬೈರೇಗೌಡ.— ಇಲ್ಲಿ ಉತ್ತರ ಕೊಡುತ್ತಾ ದರಗಳನ್ನು ಹೆಚ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಅದೇ ರೀತಿ ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಗೆ ಮತ್ತು ಹರಿಹರದಲ್ಲಿರುವ ಫಾಲಿಫೈಬರ್ಸ್ ಕಾರ್ಖಾನೆಗೆ ಏವು ಬಿದಿರನ್ನು ಸರಬರಾಜು ಮಾಡಲಾಗುತ್ತಿದೆ, ಅದರ ದರವನ್ನು ಸಹ ಹೆಚ್ಚು ಮಾಡಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಹಿಂದಿನ ದರಗಳನ್ನು ಪುನರ್ವಿಮರ್ಶೆ ಮಾಡಬೇಕೆಂಬುದೇ ನಮ್ಮ ಇಚ್ಛೆಯಾಗಿದೆ. ಆದರೆ ಹಿಂದಿನ ಸರ್ಕಾರದವರು ಕಾನೂನುಬದ್ಧವಾಗಿ ಅವರೊಡನೆ ಅಗ್ರಿಮೆಂಟ್ ಮಾಡಿಕೊಂಡಿರುವುದರಿಂದ ದರವನ್ನು ಹೆಚ್ಚು ಮಾಡುವುದಕ್ಕೆ ಕಾನೂನುಬದ್ಧವಾಗಿ ನಮಗೆ ಅಧಿಕಾರ ಇಲ್ಲವಾಗಿದೆ. ಆದರೂ ಸಹ ಅವರು ಏನಾದರು ಬೇರೆ ಬೇರೆ ಸರ್ಕಾರದ ಸೌಲಭ್ಯಗಳನ್ನು ಪಡೆಯುವುದಕ್ಕೆ ಬಂದಾಗ ಈ ದರಗಳನ್ನು ಹೆಚ್ಚು ಮಾಡುವ ಬಗ್ಗೆ ಅವರ ಮನವೊಲಿಸಿ ಹೆಚ್ಚು ಮಾಡಬೇಕು ಎಂಬುದೂ ಸರ್ಕಾರದ ಉದ್ದೇಶವಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಅರಣ್ಯ ಇಲಾಖೆಯಿಂದ ಬರುತ್ತಿರುವ ಆದಾಯ ೧೯೬೯–೭೦ರಲ್ಲಿ ಮತ್ತು ೧೯೭೦–೭೧ರಲ್ಲಿ ಎಷ್ಟೆಷ್ಟು ಹೆಚ್ಚಾಗಿದೆ ಎಂಬ ಬಗ್ಗೆ ವಿವರಗಳನ್ನು ಕೊಡುತ್ತೀರಾ ?

SRI K. H. PATIL.—Madam, it has already been laid on the table of the House. However, for the information of the Hon'ble Members I would like to give the same again.

In the year 1969–70 — the income was Rs. 14 crores and odd.

1970–71	do	Rs. 15 crores 50 lakhs.
1971–72	do	Rs. 15 crores 40 lakhs.

At present the income is Rs. 20 crores.

ಶ್ರೀ ಹಂಜಿ ಶಿವಣ್ಣ.—ಈಗ ಕೆಲವು ಕಡೆ ಇರುವ ದಟ್ಟವಾದ ಕಾಡನ್ನು ಕಡಿದು ಆ ಜಾಗವನ್ನು ಪ್ಲಾಂಟೇಷನ್‌ಗೆ ಉಪಯೋಗ ಮಾಡಿಕೊಳ್ಳುತ್ತಿದ್ದೀರಿ, ಈ ರೀತಿ ಕಾಡು ಕಡಿಯುವುದಕ್ಕೆ ಬದಲು ಹೊಸದಾಗಿಯೇ ಕಾಡನ್ನು ಬೆಳೆಸುವುದು ಸೂಕ್ತವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟ್‌ನಲ್ಲಿರುವ ಮರಗಳನ್ನು ಹೆಚ್ಚು ಕಾಲ ಬಿಡುವುದಕ್ಕಾಗುವುದಿಲ್ಲ. ಕೆಲವು ಭಾಗ ಕಡಿಯಬೇಕಾಗುತ್ತದೆ. ಆ ರೀತಿ ಕಡಿದ ಭಾಗಗಳಲ್ಲಿ ಹೊಸದಾಗಿ ರೀ-ಪ್ಲಾನ್ ಟೇಷನ್ ಮಾಡುತ್ತಿದ್ದೇವೆ. ಆದರೆ ಅನಾವಶ್ಯಕವಾಗಿ ಮರಗಳನ್ನು ಕಡಿಯುವುದನ್ನು ಬಂದ್ ಮಾಡಿದ್ದೇವೆ.

SRI DODDATHIMMIAH.—One of the reasons for decrease in the forest revenue is due to the smuggling of valuable timbers outside the State. If I remember correct, some years back, there was a Forest Officers conference, wherein they made certain recommendations. In their recommendations, they recommended that the Guards and the Forest Range Officers who are on the borders should be provided with Revolvers and other essential weapons, so that they may be able to check the smuggling of timbers outside the State. So, will the Government consider those recommendations and take a decision to implement it immediately ?

SRI K. H. PATIL.—The Hon'ble Member has already carried his own impression and opinion. The Government is welcoming such suggestions, and would certainly take them into consideration. But, I don't bare with him that the old idea he is carrying will hold good today also.

ಶ್ರೀ ಸಿ. ಬೈರೇಗೌಡ.—ದರಗಳನ್ನು ಹೆಚ್ಚು ಮಾಡುವ ವಿಚಾರದಲ್ಲಿ ಅವರ ಮನವೊಲಿಸಲಾಗುತ್ತಿದೆ ಎಂದು ಹೇಳಿದಿರಿ, ಆ ವಿಚಾರ ಈಗ ಯಾವ ಹಂತದಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮನವೊಲಿಸುವುದು ಒಮ್ಮೆ ಮಾತ್ರ ಆಗುತ್ತದೆ. ಆದು ಎರಡು ಮೂರು ಸಲ ಆಗುವುದಿಲ್ಲ. ಆದಕೆ ಅದು ಇನ್ನೂ ಆಗಿಲ್ಲ, ಅದಕ್ಕೆ ಕಾರಣ ಹಿಂದಿನ ಸರ್ಕಾರದವರು ಮಾಡಿಕೊಂಡಿರುವ ಅಗ್ರಿಮೆಂಟ್, ಆದಕಾರಣ ಕೂಡಲೆ ಈ ರೇಟ್‌ಗಳನ್ನು ಬದಲಾವಣೆ ಮಾಡುವುದ ಕ್ಕಾಗುವುದಿಲ್ಲ.

ಶ್ರೀ ವಿ. ಕೃಷ್ಣರಾವ್.—ಆ ಅಗ್ರಿಮೆಂಟ್ ಎಲ್ಲಿಯವರೆಗೆ ಜಾರಿಯಲ್ಲಿರುತ್ತದೆ ?

ಶ್ರೀ ಕೆ. ಎಚ್. ಪಾಟೀಲ್.—೨೦೦೫ನೇ ಇಸವಿಯವರೆಗೆ

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಸರ್ಕಾರದವರು ಮತ್ತು ಖಾಸಗಿಯವರು ಮರಗಳಲ್ಲಿರುವ ಕೊಂಬೆಗಳನ್ನು ಮಾತ್ರ ಕಡಿದು ಉಳಿದ ಭಾಗವನ್ನು ಹಾಗೆಯೇ ಬಿಡುತ್ತಿದ್ದಾರೆ. ಇದನ್ನು ಫಾರೆಸ್ಟ್ ಕಾರ್ಪೊರೇಷನ್ ಅವರು ಕಡಿದು ಸಲಕರಣೆಗಳನ್ನು ಮಾಡುವುದಕ್ಕೆ ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು ? ಮುಖ್ಯವಾಗಿ ಮಲೆನಾಡಿನ ಭಾಗದಲ್ಲಿರುವ ತೀರ್ಥಹಳ್ಳಿ, ಸಾಗರ ಮುಂತಾದ ಕಡೆಗಳಲ್ಲಿ ಇದನ್ನು ಉಪಯೋಗ ಮಾಡಲು ಸಣ್ಣ ಸಣ್ಣ ಕಾರ್ಖಾನೆಗಳನ್ನು ಏತಕ್ಕೆ ಪ್ರಾರಂಭ ಮಾಡಬಾರದು ?

ಶ್ರೀ ಕೆ. ಎಚ್. ಪಾಟೀಲ್.—ಈ ರೀತಿ ಕಡಿಯದೆ ಬಿಟ್ಟುಬಿಡುವ ಮರಗಳನ್ನು ಕಡಿದು ಉಪಯೋಗ ಮಾಡುವುದಕ್ಕಾಗಿ ಈಗಾಗಲೇ ಕಾರವಾರದಲ್ಲಿ ೩ ಕಾರ್ಖಾನೆಗಳನ್ನು ಹಾಕಿದ್ದೇವೆ. ಇನ್ನೂ ಮೂರು ಹಾಕಬೇಕೆಂದಿದ್ದೇವೆ. ಅಲ್ಲಿ ಆ ಕೆಲಸ ಮುಂಗಿದ ಮೇಲೆ ಶಿವಮೊಗ್ಗ ಮತ್ತು ತುಮ್ಕೂ ಏರಿಯಾಕ್ಕೆ ಬರುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳುತ್ತಿರುವುದು ಸರ್ಕಾರಕ್ಕೆ ಗೊತ್ತಾಗುತ್ತಿದೆ. ಇವೊತ್ತಿನ ಬೆಲೆಗಳ ಪರಿಸ್ಥಿತಿಯನ್ನು ನೋಡಿದಾಗ, ಈಗ ಕೆಲವು ಕಾರ್ಖಾನೆಗಳವರಿಗೆ ಹಿಂದೆ ಏನು ಒಂದೂ

(ಶ್ರೀ ಡಿ. ದೇವರಾಜ ಅರಸ್)

ಬೆಲೆಯನ್ನು ಗೊತ್ತುಮಾಡಲಾಗಿದೆ ಅದು ಬಹಳ ಕಡಿಮೆ ಎಂದು ಕಂಡುಬಂದರೂ ಸಹ, ಅದನ್ನು ಹೆಚ್ಚು ಮಾಡುವ ಬಗ್ಗೆ ಫೋರ್ಸ್ ಮಾಡುವುದು ಕಷ್ಟವಿದೆ. ಈಗ ಉದಾಹರಣೆಗೆ ಬೆಳಗಾಂನಲ್ಲಿರುವ ಅಲ್ಯೂಮಿನಿಯಂ ಫ್ಯಾಕ್ಟರಿಯನ್ನೇ ತೆಗೆದುಕೊಂಡರೂ ಸಹ ಆ ಕಾರ್ಖಾನೆಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಬಗ್ಗೆ ಹಿಂದೆ ಯಾವುದೋ ಕಾಲದಲ್ಲಿ ರೇಟನ್ನು ನಿಗದಿ ಮಾಡಲಾಗಿತ್ತು. ಅದನ್ನು ಹೆಚ್ಚು ಮಾಡ ಬೇಕೆಂದು ನಾವು ಅವರೊಡನೆ ಮಾತುಕತೆ ಮಾಡುವುದರೊಳಗೆ ಅವರು ಕೋರ್ಟಿಗೆ ಹೊರಟು ಹೋಗಿದ್ದಾರೆ. ಆದಕಾರಣ ನಾವೇನಾದರು ರೇಟ್ ವಿಚಾರದಲ್ಲಿ ಫೋರ್ಸ್ ಮಾಡುವುದಕ್ಕೆ ಹೋದರೆ ಅದು ಕೋರ್ಟಿನಲ್ಲಿ ತೀರ್ಮಾನವಾಗಬೇಕಾಗುತ್ತದೆ. ಇದು ಹಿಂದೆ ತೀರ್ಮಾನವಾಗಿರುವುದು. ಈಗ ಒಬ್ಬರ ಹತ್ತಿರ ಮಾತನಾಡಿದ್ದೇವೆ. ಬಿರ್ಲಾ ಕಂಪನಿಯವರು ಇತ್ತೀಚೆಗೆ ಕಾರ್ಖಾನೆ ಪ್ರಾರಂಭ ಮಾಡಿದ್ದಾರೆ. ಆಲ್ಲಿ ಪ್ರೊಡಕ್ಷನ್ ಪ್ರಾರಂಭವಾಗಿ ಇನ್ನೂ ಎರಡುವರ್ಷಗಳಾಗಿಲ್ಲ. ಈಗ ನಾವು ಅವರಿಗೂ ಹೆಚ್ಚು ದರ ಕೊಡಬೇಕೆಂದು ಹೇಳಿದ್ದೇವೆ. ಅವರು ಸಹಕೊಡುವ ಮನೋಭಾವ ವ್ಯಕ್ತಪಡಿಸಿದ್ದಾರೆ. ತಕ್ಷಣದಲ್ಲಿಯೇ ಅದನ್ನು ತೀರ್ಮಾನ ಮಾಡುತ್ತೇವೆ. ಆದರೆ ಇದರ ಬಗ್ಗೆ ನಾವು ಲೀಗಲ್ ಆಗಿ ಎನ್‌ಫೋರ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಈಗ ಒಂದು ಕಂಪನಿಗೆ ೫೦ ಸಾವಿರ ಟನ್ ಮರವನ್ನು ಏನು ಕೊಡುತ್ತಿದ್ದೀರಿ ಅದರಲ್ಲಿ ೨೫ಸಾವಿರ ಟನ್ ಕೊಟ್ಟು ಉಳಿದದ್ದು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ.

SRI D. DEVARAJ URS.—An agreement was there. The Hon. Members may advise us and we will tell them like that.

MADAM SPEAKER.—Now the question Hour is over.

2-00 P.M.

QUESTION FOR ANSWER ON THE DAY(BUT NOT TAKEN UP)
LEASE OF LAND BY M. I. S. I.

371. SRI ABDUL KHUDDUS ANWAR (Bhadravathi).—Will the Minister for Industries and Parliamentry Affairs be pleased to state.-

(*a*) the extent of iands leased by M. I. S. L. to various organisations:

(*b*) the names of such organisations and the terms and conditions under which the lands have been granted.

(*c*) whether any applications for lease of land is pending since last 4 years with M.I.S,L. if so, the reasons for the same?

SRI S. M. KRISHNA (Minister for Industries and Parliamentary Affairs).—

(*a*) 82.34 Acres.

(*b*) *Vide* Statements A and B placed an the Table of the House*

(*c*) No

*Copy placed in the Karnataka Legislative library vide No. 24 3-4-1974.